<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.287/2017

ಚಾಸಾ-7 ಪ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 16.03.2020

| | | |
|---|---|---|
| ಹೆಸರು | ಃ | ಪ್ರಕಾಶ ಗೌಂಡಿ |
| ತಂದೆ ಹೆಸರು | ಃ | ದೌಲತ್ |
| ವಯಸ್ಸು | ಃ | 31-ವರ್ಷ |
| ಉದ್ಯೋಗ | ಃ | ಗೌಂಡಿ |
| ವಾಸಸ್ಥಳ | ಃ | ಮಾಶಾಳ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಚಾಸಾ-1 ಗೊತ್ತು. ಮೃತ ಕಸ್ತೂರಿಬಾಯಿ ನನ್ನ ಸಂಬಂಧಿ. ಆರೋಪಿ ಗೊತ್ತು. ದಿನಾಂಕ 27.01.2017 ರಂದು ಚಾಸಾ-1 ರವರು ಮೃತ ಕಸ್ತೂರಿಬಾಯಿ ರವರನ್ನು ಹೈದ್ರಾದ ಖಾಜಾಸಾಬ ದರ್ಗಾಕ್ಕೆ ಹೋಗುತ್ತಿದ್ದಾಗ ಅಂದಾಜು 11.30 ಗಂಟೆಗೆ ಮೋಟರ್ ಸೈಕಲ್ ನಂ.ಎಂಹೆಚ್-13/ಬಿಜೆ-0609 ರ ಮೇಲೆ ಹೋಗುತ್ತಿದ್ದಾಗ ಈರಣ್ಣ ಹಿಪ್ಪರಗಿ ರವರ ಹೊಲದ ಹತ್ತಿರ ಮೂತ್ರ ವಿಸರ್ಜನೆಗೆಂದು ರಸ್ತೆಯ ಪಕ್ಕದಲ್ಲಿ ಮೋಟರ್ ಸೈಕಲ್ ನಿಲ್ಲಿಸಿದ್ದು ಅದೇ ಸಮಯದಲ್ಲಿ ಆರೋಪಿತನು ಮಾಶಾಳದಿಂದ ಹೈದ್ರಾ ಕಡೆಗೆ ಲಾರಿ ನಂ.ಕೆಎ-32/7392 ನ್ನು ಅತಿ ವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿ ರಸ್ತೆ ಪಕ್ಕದಲ್ಲಿ ನಿಂತಿದ್ದ ಕಸ್ತೂರಿಬಾಯಿ ಹಾಗೂ ಮೋಟರ್ ಸೈಕಲಗೆ ಡಿಕ್ಕಿಪಡಿಸಿ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋಗಿದ್ದು ಮೃತ

ಕಸ್ತೂರಿಬಾಯಿಯ ಎರಡು ಕಾಲುಗಳು, ಹೊಟ್ಟೆ ಹಾಗೂ ತಲೆಗೆ ಭಾರಿ ಒಳಪೆಟ್ಟಾಗಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮರಣ ಹೊಂದಿರುವ ಬಗ್ಗೆ ನನಗೆ ಚಾಸಾ-9 ರವರು ತಿಳಿಸಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಕಸ್ತೂರಿಬಾಯಿ ಭಾರಿ ರಕ್ತಗಾಯವಾಗಿ ಮೃತಪಟ್ಟಿರುತ್ತಾಳೆ. ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ರೂ.300/- ಖರ್ಚನೊಂದಿಗೆ ಮುಂದೂಡಲಾಯಿತು.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ